ಅ) ಪ್ರಾಣಿ ಸಂಗ್ರಹಾಲಯದಲ್ಲಿ 31-3-2001ರವರೆಗೆ ಕಳಕಂಡ ವಿವಿಧ ಪ್ರಾಣಿಗಳ ಸಂಖ್ಯೆ ಈ ರೀತಿ ಇದೆ.

1.	ಸಸ್ತನಿಗಳು	-	351	ಸಂಖ್ಯೆ
2.	ಸರಿಸೃಪಗಳು	-	17	ಸಂಖ್ಯೆ
3.	ಪಕ್ಷಿಗಳು	-	446	ಸಂಖ್ಯೆ
	ಒಟ್ಟು	-	1134	ಸಂಖ್ಯೆ

ಮೈಸೂರು ಮೃಗಾಲಯದಲ್ಲಿರುವ ಸಿಬ್ಬಂದಿಗಳ ಒಟ್ಟು ಸಂಖ್ಯೆ 134.

ಇ) ಮೈಸೂರು ಮೃಗಾಲಯದಲ್ಲಿ 2000-2001ರ ಸಾಲಿನಲ್ಲಿ ವಿವಿಧ ಮೂಲಗಳಿಂದ ಬಂದ ಆದಾಯ ರೂ. 1,93,67,300-00 ಗಳಾಗಿರುತ್ತದೆ.

ರಾಜ್ಯದ ಕರಾವಳಿಯ ಮೀನುಗಾರಿಕೆ ಬಂದರುಗಳನ್ನು ಅಭಿವೃದ್ಧಿಗೊಳಿಸುವುದು.

2272(2756) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಕರಾವಳಿಯಲ್ಲಿರುವ ಮೀನುಗಾರಿಕಾ ಬಂದರುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಮೀನುಗಾರಿಕಾ ಬಂದರು ಹಾಗೂ ಜಟ್ಟಿ ನಿರ್ಮಾಣದ ಬಗ್ಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರವು ಈವರೆಗೆ ಪಡೆದುಕೊಂಡಿರುವ ಅನುದಾನದ ವಿವರಗಳನ್ನು ನೀಡುವುದು?

ಶ್ರೀ ಬಿ. ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :—

ಅ) ಮಂಗಳೂರು 1ನೇ ಹಂತ, ಮಲ್ಪೆ ಒಂದನೇ ಹಂತ ಹೊನ್ನಾವರ, ತದಡಿ ಮತ್ತು ಕಾರವಾರ ಒಂದನೇ ಹಂತ ಮೀನುಗಾರಿಕೆ ಬಂದರುಗಳನ್ನು ನಿರ್ಮಿಸಲಾಗಿದೆ.

ಮಲ್ಪೆ 2ನೇ ಹಂತ ಮೀನುಗಾರಿಕೆ ಬಂದರು ಮತ್ತು ಹೆಜಮಾಡಿ ಕೋಡಿ, ಕೋಡಿಬೆಂಗ್ರೆ ಮೀನುಗಾರಿಕೆ ಇಳಿದಾಣಗಳ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ.

ಮಂಗಳೂರು 2ನೇ ಹಂತ, ಗಂಗೊಳ್ಳಿ, ಕಾರವಾರ 2ನೇ ಹಂತ ಮತ್ತು ಅಮರಹಳ್ಳಿ ಮೀನುಗಾರಿಕೆ, ಬಂದರುಗಳು ಮಂಜೂರಾತಿಯಾಗಿದ್ದು, ಟೆಂಡರ್ ಕರೆಯಲಾಗಿದೆ.

ಹಂಗಾರಕಟ್ಟೆ, ಅಳ್ವಕೋಡಿ ಮತ್ತು ಬೇಲಿಕೇರಿಗಳಲ್ಲಿ ಮೀನುಗಾರಿಕೆ ಇಳಿದಾಣಗಳನ್ನು ನಿರ್ಮಿಸುವ ಬಗ್ಗೆ ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಅ) ಕೇಂದ್ರ ಸರ್ಕಾರದಿಂದ ಪಡೆದುಕೊಂಡಿರುವ ಅನುದಾನದ ವಿವರಗಳು ಈ ಕೆಳಗೆ ನೀಡಿದೆ.

ಕ್ರಮ ಸಂಖ್ಯೆ	ಮೀನುಗಾರಿಕೆ ಬಂದರು ಇಳಿದಾಣ	ಕೇಂದ್ರದ ಅನುದಾನ (ರೂ.ಲಕ್ಷಗಳಲ್ಲಿ)
1.	ಮಲ್ಪೆ 1ನೇ ಹಂತ	299.33
2.	ಮಲ್ಪೆ 2ನೇ ಹಂತ	598.35
3.	ಮಂಗಳೂರು 1ನೇ ಹಂತ	45.00
4.	ಮಂಗಳೂರು 2ನೇ ಹಂತ	30.00
5.	ಗಂಗೊಳ್ಳಿ	106.56
6.	ಹೆಜಮಾಡಿ ಕೋಡಿ	47.50
7.	ಕೋಡಿಬೆಂಗ್ರೆ	27.75
8.	ಕಾರವಾರ 2ನೇ ಹಂತ	9.305
9.	ಅಳ್ವಕೋಡಿ	10.00
10.	ಬೇಲಿಕೇರಿ	25.00
11.	ಹೊನ್ನಾವರ	45.93

ಮಲ್ಪೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಯಕ್ರಮಗಳು.

2273(2757) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಉಡುಪಿ ಜಿಲ್ಲೆಯ ಮಲ್ಪೆ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ರಾಜ್ಯ ಸರಕಾರ ತೆಗೆದುಕೊಂಡಿರುವ ಕ್ರಮಗಳೇನು?

ಆ) ಸೈಂಟ್ ಮೇರಿಸ್ ದ್ವೀಪದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರಕಾರ ಹಾಕಿಕೊಂಡಿರುವ ಯೋಜನೆಗಳೇನು? (ವಿವರ ನೀಡುವುದು)